ಮೂಲ ದಾವಾ ಸಂಖ್ಯೆ . 127/2017 ಪಿ ಡಬ್ಲ್ಯೂ 1

(ದಿನಾಂಕ 09-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮಧ್ಯಂತರ ಅರ್ಜಿ ನಂ.5 ಮತ್ತು 6 ರ ಆದೇಶದ ಮೇರೆಗೆ

ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಸಿ ಬಿ ಪಿ ವಕೀಲರಿಂದಃ-

ನಾನು 4 ನೇ ತರಗತಿವರೆಗೆ ವ್ಯಾಸಂಗ ಮಾಡಿದ್ದೇನೆ. ಈ ದಾವೆಯನ್ನು ನಮ್ಮ ತಾಯಿಗೆ ಸೇರಿದ ಹೆಣ್ಣಾಸ್ತಿಯನ್ನು ಕುರಿತು ದಾಖಲಿಸಿದ್ದೇನೆ. ನಿಪಿ-1 ದಾಖಲೆಯು ನನ್ನ ಬಳಿ ಇತ್ತು. ಸದರಿ ದಾಖಲೆಯಾಧಾರದ ಮೇಲೆ ಮ್ಯುಟೇಶನ್ ಮಾಡಿಸಿಕೊಳ್ಳಲು ನಾನು ಅರ್ಜಿ ನೀಡಿದ್ಧೆ ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸನ್ 1968 ರಿಂದ ದಾವಾಸ್ತಿಯ ಪಹಣಿ ಉಗ್ಗಣ್ಣನವರ ಹುಲುಗಪ್ಪ ಇವರ ಹೆಸರಿನಲ್ಲಿ ಇರುತ್ತದೆಂದರೆ ಸಾಕ್ಷಿಯು ಅವರು ನಮಗೆ ಸಂಬಂಧ ಇಲ್ಲ ಅವರೇ ಬೇರೆ ನಾವೇ ಬೇರೆ ಎನ್ನುತ್ತಾರೆ. ಸದರಿ ಪಹಣಿಗಳನ್ನು ನಾನು ಪ್ರಶ್ನೆ ಮಾಡಿಲ್ಲ. ಸುಮಾರು 50 ವರ್ಷದ ಹಿಂದೆ ಆಗಿರುವ ಕಂದಾಯ ದಾಖಲೆಗಳನ್ನು ಪ್ರಶ್ನಿಸದೇ ಇರುವುದರಿಂದ ಈ ದಾವೆಯನ್ನು ದಾಖಲಿಸಲು ಕಾಲಪರಿಮಿತಿಯಲ್ಲಿ ಬರುವುದಿಲ್ಲವೆಂದರೆ ಸರಿಯಲ್ಲ.

ಸಣ್ಣ ಕರಿಯಪ್ಪ ಇವರಿಗೆ ದೊಡ್ಡ ಕರಿಯಪ್ಪ ಅನ್ನುವ ಅಣ್ಣ ಇದ್ದ ಎಂದರೆ ಸರಿ. ಸಣ್ಣ ಕರಿಯಪ್ಪ ಮತ್ತು ದೊಡ್ಡ ಕರಿಯಪ್ಪ ಇವರ ತಂದೆಯ ಹೆಸರು ಉಗ್ಗಣ್ಣನವರ ದೊಡ್ಡದೇವಪ್ಪ ಎಂದರೆ ಸರಿ. ಸದರಿಯವನು ದಾವಾಸ್ತಿಗೆ ಮೂಲ ಮಾಲೀಕ ಎಂದರೆ ಸರಿಯಲ್ಲ. ನಮ್ಮ ತಾಯಿಯ ಹೆಸರಿಗೆ ದಾವಾಸ್ತಿಯನ್ನು ನನ್ನ ಅಜ್ಜಿ ಹನುಮವ್ವ ಇವರು ನೊಂದಣಿ ಮಾಡಿಕೊಡುವಾಗ ಹನುಮವ್ವ ಹೆಸರಿನಲ್ಲಿ ಏನು ಕಂದಾಯ ದಾಖಲೆ ಇತ್ತು ಎಂದರೆ ಸಾಕ್ಷಿಯು ಆ ಸಮಯದಲ್ಲಿ ನಾವು ಬಹಳ ಚಿಕ್ಕವರು ಆ ಕಾರಣದಿಂದ ನಮಗೆ ಗೊತ್ತಿಲ್ಲವೆನ್ನುತ್ತಾರೆ. ದಾವಾಸ್ತಿಗೆ ನನ್ನ ಅಜ್ಜಿ ಮತ್ತು ನನ್ನ ತಾತ ಸಂಪೂರ್ಣ ಹಕ್ಕುದಾರರು ಅಲ್ಲವೆಂದರೆ ಸರಿಯಲ್ಲ. ಆ ಕಾರಣದಿಂದಾಗ ನಮ್ಮ ತಾಯಿ ಮತ್ತು ನಮ್ಮ ದೊಡ್ಡಮ್ಮ ಇವರಿಗೆ ಆಸ್ತಿಯನ್ನು ಬರೆದುಕೊಡುವ ಹಕ್ಕು ನಮ್ಮ ಅಜ್ಜಿಗೆ ಇರುವುದಿಲ್ಲವೆಂದರೆ ಸರಿಯಲ್ಲ.

ದೊಡ್ಡಕರಿಯಪ್ಪ ಇವರಿಗೆ ಉಗ್ಗಣ್ಣನವರ ದೊಡ್ಡನಾಗಪ್ಪ, ಉಗ್ಗಣ್ಣನವರ ಹುಲುಗಪ್ಪ ಮತ್ತು ಭರಮವ್ವ ಎಂಬ 3 ಜನ ಮಕ್ಕಳು ಎಂದರೆ ಸಾಕ್ಷಿಯು ಅವರು ನಮಗೆ ಸಂಬಂಧವಿಲ್ಲವೆನ್ನುತ್ತಾರೆ. ಸದರಿ ಜಮೀನಿನಲ್ಲಿ 3 ಎಕರೆ 40 ಸೆಂಟ್ಸ ಸಣ್ಣಕರಿಯಪ್ಪ ಇವನಿಗೆ ಸೇರಿದ್ದು, ಉಳಿದ 3 ಎಕರೆ 40 ಸೆಂಟ್ಸ ದೊಡ್ಡಕರಿಯಪ್ಪ ಇವನಿಗೆ ಸೇರಿದ್ದು ಎಂದರೆ ಸರಿಯಲ್ಲ.

ಮೂಲ ದಾವಾ ಸಂಖ್ಯೆ . 127/2017 ಪಿ ಡಬ್ಲ್ಯೂ 1

2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಹೆಂಡತಿ ಎಂದರೆ ಸರಿ. 2 ನೇ ಪ್ರತಿವಾದಿ ಉಗ್ಗಣ್ಣನವರ ಹುಲುಗಪ್ಪನ ಮಗಳು ಎಂದರೆ ಸಾಕ್ಷಿಯು ಅವರು ನಮಗೆ ಸಂಬಂಧವಿಲ್ಲವೆನ್ನುತ್ತಾರೆ. ದಾವಾಸ್ತಿಗೆ 1 ನೇ ಪ್ರತಿವಾದಿಯು ಸಂಪೂರ್ಣ ಮಾಲೀಕರಿದ್ದು ಅವನೇ ಸ್ವಾಧೀನದಲ್ಲಿರುತ್ತಾನೆ ದಾವಾಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯನ್ನು ಕಬಳಿಸುವ ಸಲುವಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವೆಯಲ್ಲಿ ತೋರಿಸಿರುವ ದಾವಾಕ್ಕೆ ಕಾರಣದ ದಿನಾಂಕಗಳು ಈ ದಾವೆಯ ಸಂಬಂಧ ಸೃಷ್ಟಿ ಮಾಡಿಕೊಂಡಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ